# ಮೋಹಚುಂಬಿತ ಮಾಯೆ

■ ಕೆ.ಟಿ. ಗಟ್ಟಿ

## ಮತ್ತೆ ಅಮೆರಿಕಕ್ಕೆ ಅಭಿ-ಸುಕೃತಿ

‘ಅಪ್ಪಾ, ನೀವು ಇಷ್ಟು ದೊಡ್ಡ ಮನೆ ಯಾಕೆ ಕಟ್ಟಿಸಿದಿರಿ? ಅಮೆರಿಕೆಯಲ್ಲಿ ನಾನು ಇನ್ನೂ ಆರೇಳು ವರ್ಷ ಕೆಲಸ ಮಾಡಬೇಕೆಂದುಕೊಂಡಿದ್ದೇನೆ. ಆಗ ನನ್ನ ಬಳಿ ಬೇಕಾದಷ್ಟು ಹಣ ಇರುತ್ತದೆ ಎರಡು ಮೂರು ಕೋಟಿ ಇರುತ್ತದೆ. ಆಗ ಭಾರತಕ್ಕೆ ಬಂದು ಒಂದು ಮನೆ ಕಟ್ಟಿಸಿಕೊಳ್ಳುವುದು, ನನ್ನದೇ ಒಂದು ಸಾಫ್ಟ್‌ವೇರ್ ಕಂಪೆನಿ ಮಾಡಿಕೊಳ್ಳುವುದು ಎಂದು ಯೋಚಿಸಿದ್ದೆ’ ಎಂದ ಅಭಿ.

‘ನೀನು ಈ ಬಗ್ಗೆ ನನ್ನ ಬಳಿಯಾಗಲಿ ಅಮ್ಮನ ಬಳಿಯಾಗಲಿ ಏನೂ ಮಾತಾಡಲಿಲ್ಲವಲ್ಲ?’ ನರಹರಿಯೆಂದ.

‘ನಿಜ ಅಪ್ಪಾ, ಮಾತಾಡಲಿಲ್ಲ. ಇಂಥ ಯೋಚನೆಗಳನ್ನು ಕೆಲವರು ಕನಸು ಅಂತ ಹೇಳುತ್ತಾರೆ. ಆದರೆ ಆ ಕನಸು ನಿಜವಾಗುವ ಹಂತಕ್ಕೆ ಬರುವ ಮೊದಲು ಅದರ ಬಗ್ಗೆ ಯಾರಲ್ಲೂ ಹೇಳಿಕೊಳ್ಳಬಾರದು ಅನ್ನುವುದು ನನ್ನ ಭಾವನೆ’.

